ಸದನವು 3 ಗಂಟೆ 20 ನಿಮಿಷಕ್ಕೆ ಮರುಸಮಾವೇಶಗೊಂಡಿತು.

(ಉಪಾಧ್ಯಕ್ಷಿಣಿಯವರು ಪೀಠದಲ್ಲಿ)

ಶ್ರೀ ವಾಟಾಳ್ ನಾಗರಾಜ್:- ಮಹಾರಾಷ್ಟ್ರದಲ್ಲಿ 10-12 ಲಕ್ಷ ಜನ ಕನ್ನಡಿಗರಿದ್ದಾರೆ, ಅವರಿಗೆ ರಕ್ಷಣೆ ಇಲ್ಲ, ದೊಡ್ಡ ಗದ್ದಲವಾಗಿ ಎಲ್ಲರೂ ವಲಸೆ ಬರುತ್ತಿದ್ದಾರೆ, ನಮ್ಮ ಸರ್ಕಾರ ರಕ್ಷಣೆ ಕೊಡುತ್ತಿಲ್ಲ, ಮಹಾರಾಷ್ಟ್ರ ಸರ್ಕಾರವೂ ಅವರಿಗೆ ರಕ್ಷಣೆ ಕೊಡುತ್ತಿಲ್ಲ. ಮಹಾರಾಷ್ಟ್ರ ಸರ್ಕಾರ ಅವರಿಗೆ ರಕ್ಷಣೆ ಕೊಡಬೇಕಾಗಿದ್ದುದು ಕರ್ತವ್ಯ. ರಕ್ಷಣೆ ಕೊಡಲಿಲ್ಲ ಎನ್ನುವ ಕಾರಣಕ್ಕಾಗಿ ರೈಲು ತುಂಬ ಕನ್ನಡಿಗರು ಬರುತ್ತಿದ್ದಾರೆ, ಅವರ ಪರಿಸ್ಥಿತಿಯೇನು? ಅವರಿಗೆ ಸಹಕಾರ ಕೊಡುವವರು ಯಾರು?

ಉಪಾಧ್ಯಕ್ಷಿಣಿಯವರು:- ಮಾನ್ಯ ಮಂತ್ರಿಗಳು ಹೌಸ್‌ಗೆ ಬರುತ್ತಿದ್ದಾರೆ, ಅವರು ಬಂದ ಮೇಲೆ...

ಶ್ರೀ ಆರ್.ವಿ. ದೇಶಪಾಂಡೆ:- ಇದು ಬಹಳ ಮಹತ್ವದ ಪ್ರಶ್ನೆ ಇದೆ. ಮುಂಬಯಿಯಲ್ಲಿ ಪ್ರಧಾನಿ ಇದ್ದರು, ಅವರೇ ಒಪ್ಪಿಕೊಂಡಿದ್ದಾರೆ ಬಹಳಷ್ಟು ಜನ ಬಾಂಬೆ ಬಿಟ್ಟು ಹೋಗುತ್ತಿದ್ದಾರೆ. ನಾನು ಬಾಂಬೆಗೆ ಕಾಂಟಾಕ್ಟ್ ಮಾಡಿದಾಗ ನನಗೂ ಗೊತ್ತಾಯಿತು, ಬಹಳ ಜನ ಕನ್ನಡಿಗರು ಬರ್ತಿದ್ದಾರೆ, ಬಹಳ ಭಯ ತೊಂದರೆಯಲ್ಲಿದ್ದಾರೆ, ಭಯದ ವಾತಾವರಣ ಇದೆ, ಮತ್ತು ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸದಿಂದ ಸದನಕ್ಕೆ ಏಕೆ ಬರ್ತಿಲ್ಲ, ನನಗೆ ಗೊತ್ತಾಗುತ್ತಿಲ್ಲ, ನನಗೆ ಆಶ್ಚರ್ಯವಾಗುತ್ತಿದೆ. ಅವರು ಮೂರ್ನಾಲ್ಕು ವಿಷಯಗಳಲ್ಲಿ ಸ್ಟೇಟ್‌ಮೆಂಟ್ ಮಾಡಬೇಕು. 10 ಗಂಟೆತನಕ ನಾವು ಕಾಯುವುದಕ್ಕಾಗುವುದಿಲ್ಲ, ದಯಮಾಡಿ ಮುಖ್ಯಮಂತ್ರಿಗಳನ್ನು ಕರೆಯಿಸಿ, ಅವರು ಬಂದು ಹೇಳಲಿ.

ಶ್ರೀ ವಾಟಾಳ್ ನಾಗರಾಜ್:- ಬಹಳ ಭಯದ ವಾತಾವರಣ ಅಲ್ಲಿ ರಚನೆಯಾಗಿದೆ, ಕನ್ನಡಿಗರಿಗೆ ಅಲ್ಲಿ ರಕ್ಷಣೆ ಇಲ್ಲ, ಈ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ, ಇದು ಸರಿಯಲ್ಲ, ಬೆಳಿಗ್ಗೆಯಿಂದ ಮುಖ್ಯಮಂತ್ರಿಗಳನ್ನು ಕರೆಯುತಿದ್ದೇವೆ, ಏನು ನಡೆದಿದೆ ಎಂದು ಹೇಳಬೇಕು ಮುಖ್ಯಮಂತ್ರಿಗಳು ಯಾರೂ ಇಲ್ಲಲ್ಲ, ಯಾರಾದರೂ ಹೇಳಬೇಕು.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡುವರು)

ಉಪಾಧ್ಯಕ್ಷಿಣಿ:- ಅವರು ಸದನಕ್ಕೆ ಬಂದ ತಕ್ಷಣ ಅದಕ್ಕೆ ಏನು ಉತ್ತರ ಕೊಡಬೇಕೋ ಅದನ್ನು ಕೊಡುತ್ತಾರೆ.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ:- ಮಹಾರಾಷ್ಟ್ರ ಸರ್ಕಾರ ಇದುವರೆಗೂ ಕನ್ನಡಿಗರಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ಯಾವುದೇ ಮಾತನಾಡಿಲ್ಲ, ಒಂದು ಕೋಟಿ ರೂ. ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಹೊರತಾಗಿ ಈ ಅಮಾಯಕ ಅಥವಾ ಬಲಿಪಶುಗಳಾಗಿರುವ ಜನರಿಗೆ ರಕ್ಷಣೆ ಕೊಡುವ ಮಾತು ಆಡಿಲ್ಲ. ಇದು ತಪ್ಪು ನೀತಿ. ಏಕೆಂದರೆ ಒಬ್ಬ ಮನುಷ್ಯ ಸಾಯುವ ಸಂದರ್ಭದಲ್ಲಿ ಸರ್ಕಾರ ರಕ್ಷಣೆಗೆ ಬರೆದಿದ್ದರೆ ಬರುವವರು ಯಾರು? ಆದ್ದರಿಂದ ಗೋವಾದಲ್ಲಿ ಗಲಾಟೆ ಆಯಿತು, ಅಲ್ಲಿ ನಾವು ಬಲಿಪಶು ಆಗಿದ್ದೇವೆ, ಮಹಾರಾಷ್ಟ್ರದಲ್ಲಿ ಆಯಿತು ನಾವು ಬಲಿಪಶು ಆಗಿದ್ದೇವೆ, ಆದ್ದರಿಂದ ಮಾನ್ಯ ವೀರಪ್ಪ ಮೊಯಿಲಿಯವರು ಆಗಿರಬಹುದು ಅಥವಾ ಪ್ರಧಾನಮಂತ್ರಿ ಆಗಿರಬಹುದು ಅವರಿಂದ ಒಂದು ಸ್ಟೇಟ್‌ಮೆಂಟ್ ಕೂಡ ಇಲ್ಲ ಆದ್ದರಿಂದ ಕೂಡಲೇ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷಿಣಿಯವರೇ,....